ಬಾಗಿಲನ್ನು ಒಮ್ಮೆ ತೆಗೆದು ಹೊರಗಿಣುಕಿದರು. ಬಹುಶಃ ಐದಾರು ಗಂಟೆಯೊಳಗೆ ಇದರಿಂದಲೇ ಹೊರಹೋಗುವ ಸನ್ನಿವೇಶ ಬರೋದಂತೂ ಗ್ಯಾರಂಟಿ ಅಂತ, ಅಲ್ಲಿಂದ ಕೆಳಗೆ ಹೋಗೋ ಕಬ್ಬಿಣದ ಮೆಟ್ಟಿಲು ಸರಿಯಿದ್ಯೋ ಇಲ್ಲವೋ ಅಂತ ನೋಡುತ್ತಿರುವಾಗ ಬಾಗಿಲು ಬಡಿದ ಶಬ್ದವಾಯಿತು.

"ಕಮಿನ್" ಎನ್ನುತ್ತಾ ತಮ್ಮ ಕುರ್ಚಿಗೆ ಮರಳಿದ ರಾಘವನ್‌ರ ಮುಂದೆ ಐಸಿಯು ಹೆಡ್ ನರ್ಸ್ ಉಷಾ ಹಾಳೆಯೊಂದನ್ನು ಟೇಬಲ್ ಮೇಲಿಟ್ಟು ನಿಂತಳು. ಅವಳು ನಿಂತರೂ, ಅವಳ ಉದ್ದ ಮೂಗು ಚಲಿಸುತ್ತಲೇ ಇತ್ತು. ಸಿಗರೇಟಿನ ವಾಸನೆ ಅವಳಿಗ್ಯಾವಾಗಲೂ ಕಿರಿಕಿರಿ ಎನ್ನುವುದರ ಅರಿವಿದ್ದ ರಾಘವನ್, "ಆ ಎಕ್ಸಾಸ್ಟ್ ಫ್ಯಾನ್ ಹಾಕು ನೋಡುವಾ" ಎಂದು ಪಟ್ಟಿಯನ್ನು ನೋಡುತ್ತಾ ಕುಳಿತರು. ಈಗಲ್ಲಿ ಎಕ್ಸಾಸ್ಟ್ ಫ್ಯಾನ್‌ನ ಗುಂಯ್ಯೆನ್ನುವ ಶಬ್ದದ ಹೊರತಾಗಿ ಬೇರೇನೂ ಶಬ್ದವಿರಲಿಲ್ಲ. ಒಂದೆರಡು ಘಳಿಗೆ ಕಳೆದ ಮೇಲೆ, ಸಿಗರೇಟು ಹೊಗೆಯ ಘಾಟು ಕಡಿಮೆಯಾದ ಮೇಲೆ ಉಷಾಳ ಮೂಗು ಸುಮ್ಮನಾಗಿದ್ದನ್ನು ಗಮನಿಸಿದ ರಾಘವನ್, "ಉಷಾ, ನಿನ್ನ ಮೂಗು ನನಗೆ ಕೊಟ್ಟು, ನನ್ನ ಮೂಗು ನೀನು ತಗೋ" ಎಂದು ತಲೆ ಎತ್ತದೇ ಹೇಳಿದರು. "ಆಗಲೀ ಸರ್, ವ್ಯವಸ್ಥೆ ಮಾಡಿಕೊಳ್ಳಿ, ಕೊಡುವೆ" ಎಂದ ಉಷಾಳಿಗೆ, ರಾಘವನ್ ಡಾಕ್ಟರು ಯಾವಾಗಲೂ ಹೇಳುತ್ತಿದ್ದ ಉಳಿದ ಮಾತುಗಳು ಈಗ ಬರದಿರುವುದರ ಕಾರಣವೂ ತಿಳಿದಿತ್ತು.

ಕಳೆದ ಐದು ವರ್ಷದಿಂದ ಇಬ್ಬರ ನಡುವೆಯೂ ನಡೆಯುತ್ತಿದ್ದ ಮಾತುಕತೆ ಇದು. ಉಷಾ, "ನಿನ್ನ ಮೂಗು ಮಾತ್ರ ನನಗೆ ಕೊಡು. ಉಳಿದ ಭಾಗಗಳೆಲ್ಲಾ ನಿನ್ನಲ್ಲಿಯೇ ಇರಲಿ" ಎಂದು ರಾಘವನ್ ಮೊದಲ ಬಾರಿ ಹೇಳಿದಾಗ ನಾಚಿ ಕೆಂಪಾಗಿದ್ದ ಉಷಾಳಿಗೆ ಆತಂಕವಾಗಿದ್ದು ನೆನಪಾಯಿತೀಗ. ತನ್ನ ಉಬ್ಬಿದ ಎದೆ ಮತ್ತು ಸಪೂರ ದೇಹದ ಕುರಿತು ಅವರು ಹೇಳಿದ್ದೆಂದು ಗೊತ್ತಾಗಿತ್ತು. ಮೊದಲ ದಿನವೇ ಶರೀರದ ಮೇಲೆ ಕಣ್ಣು ಹಾಕಿದವರ ಜೊತೆ ಏಗುವುದು ಹೇಗಪ್ಪ ಅನ್ನೋ ಯೋಚನೇಲಿ ಇಡೀ ದಿನ ಕಳೆದು ಸಂಜೆಗೆ ತಲೆ ಸಿಡಿಯತೊಡಗಿತ್ತು. ಆದರೆ, ಮೂರು ದಿನ ಕಳೆಯುವುದರೊಳಗೆ ರಾಘವನ್ ತಮಾಷೆ ಮಾಡುವವರೇ ಹೊರತು, ಅಪಾಯ ತರುವವರಲ್ಲ ಅನ್ನೋದು ಗ್ಯಾರಂಟಿಯಾಯಿತವಳಿಗೆ. ಅಂದಿನಿಂದ ಅವರು ನಿನ್ನ ಮೂಗು ನನಗೆ ಕೊಡು ಎನ್ನುವುದು, ಅವಳು ಗ್ಯಾರಂಟಿಯಾಗಿ ತಗೊಳ್ಳಿ ಅನ್ನೋದು, "ಮೂಗು ಮಾತ್ರ ಸಾಕು, ಉಳಿದ ಭಾಗ ನಿನ್ನಲ್ಲೇ ಇರಲಿ" ಅಂತ ಅವರು ಮರು ನುಡಿಯುವುದು, ಬದಲಿಯಾಗಿ ಅವಳು "ಆಗಲಿ" ಎನ್ನುವುದು ಅಭ್ಯಾಸವಾಗಿತ್ತು.

"ಉಷಾ, ತಗೋಪ್ಪ. ಒಂದು ಎರಡು ಮೂರು ಅಂತಿರೋದಕ್ಕೆ 70% ಆಕ್ಸಿಜನ್ ಸಪ್ಲೈ ಇರಲಿ. ನಾಲ್ಕು ಮತ್ತು ಐದಕ್ಕೆ 25% ಆಕ್ಸಿಜನ್ ಮಾತ್ರ ಸಪ್ಲೈ ಇರಲಿ. ಹಾಗೆ ಆರರಿಂದ ಹನ್ನೆರಡರ ವರೆಗಿನ ಪೇಶೆಂಟ್‌ಗಳಿಗೆ 5% ಆಕ್ಸಿಜನ್ ಸಪ್ಲೈ ಮಾತ್ರ ಇರಲಿ" ಎನ್ನುತ್ತಾ ರಾಘವನ್ ನೀಡಿದ ಪಟ್ಟಿಯಲ್ಲಿ ಏಳು ಹೆಸರಿನ ಮುಂದೆ 5% ಆಕ್ಸಿಜನ್ ಎಂದು ಇರುವುದನ್ನು ನೋಡಿ ಉಷಾ, "ಓ ಮೈ ಗಾಡ್" ಎಂದಳು. 5% ಆಕ್ಸಿಜನ್ ಕೊಡೋದು ಒಂದೇ, ಪೂರ್ತಿ ನಿಲ್ಲಿಸೋದು ಒಂದೇ. ಅವಳಲ್ಲಿ ನಡುಕ ಆರಂಭವಾಯಿತು. "ಬಟ್ ದೇರೀಸ್ ನೋ ಗಾಡ್, ಉಷಾ. ಓನ್ಲಿ ಹ್ಯೂಮನ್ಸ್" ಎಂದರು ರಾಘವನ್. ಉಷಾ ಅವರೆಡೆಗೆ ನೋಡಿದಳು. ತಲೆ ಎತ್ತದೆ ಈ ಮಾತುಗಳನ್ನು ಅವರು ಹೇಳಿದ್ದರು. ಸಿಗರೇಟ್ ಪ್ಯಾಕ್ ಅನ್ನು ಅವರ ಬಲಗೈ ಅದುಮಿ ಹಿಡಿದಿತ್ತು. ಐದು ವರ್ಷದಲ್ಲಿ ಸಿಗರೇಟು ವಾಸನೆ ಅವರ ಕೊಠಡಿಯನ್ನು ತುಂಬಿದ್ದನ್ನು ಇವತ್ತೇ ಅವಳು ಕಂಡಿದ್ದು. ಅವಳು ಗಾಬರಿಯಾಗಿದ್ದನ್ನು ಗಮನಿಸಿದ ರಾಘವನ್, "ಸಾರಿ ಉಷಾ. ಬೇರೆ ದಾರಿ ಇಲ್ಲ. ಮೂವತ್ತು ವರ್ಷದ ನನ್ನ ಸರ್ವಿಸ್‌ನಲ್ಲಿ ಇದೇ ಮೊದಲು. ಕರೊನಾ ಈಸ್ ಪವರ್‌ಫುಲ್ ದೆನ್ ಅಸ್. ನಾನೂ ನೀನೂ ಎಲ್ಲಾ ಹೆಲ್ಪ್‌ಲೆಸ್". ಬಹಳ ನಿಧಾನವಾಗಿ ಆದರೆ ಖಚಿತವಾಗಿ ಬಂದ ಅವರ ಮಾತುಗಳನ್ನು ಕೇಳಿ, "ಓಕೆ ಸರ್" ಎನ್ನುತ್ತಾ